ಶ್ರೀ ಎಚ್. ವಿ. ಕಾಜಲಗಿ.—ಈ ಕಟ್ಟಲುವನವನ್ನು ಬೆಳೆಸುವುದಕ್ಕೆ ಸಾಕಷ್ಟು ಜಮೀನು ಇದ್ದು ಇನ್ನೂ ಉಳಿದರೆ ಅದನ್ನು ಏನೇನಾಡಬಹುದು.

ಶ್ರೀ ಬಿ. ಗಂಗಣ್ಣ.—ಹಾಗೆ ಹೆಚ್ಚಿಗೆ ಉಳಿದರೆ ಕೊಡುತ್ತೀರಾ ?

ಶ್ರೀ ಎಚ್. ವಿ. ಕಾಜಲಗಿ.—ಹಾಗೆ ಹೆಚ್ಚಿಗೆ ಉಳಿದಿದೆ ಎಂಬುದಾಗಿ ತಾಲ್ಲೂಕ್ ಕಮಿಟಿಗಳ ಮೂಲಕ ವರದಿ ಬರಲಿ. ಬಂದರೆ ನೋಡೋಣ.

Narrow bridge at Chickanahalli, Sira Taluk on National Highway No. 4

436. Sri B. GANGANNA (Kallambella).—

Will the Minister for Public Works be pleased to state :—

(*a*) whether it has come to the notice of the Government that many road accidents have occurred at the narrow bridge at Chickanahalli, Sira Taluk on National Highway No. 4;

(*b*) whether Government has any proposal before it for straightening the curve or constructing a new bridge at this point ?

Sri K. LAKKAPPA (Minister for Public Works).—

(*a*) Yes.

(*b*) Yes ; a proposal to reconstruct this bridge and to improve the curves, is under consideration.

ಶ್ರೀ ಬಿ. ಗಂಗಣ್ಣ.—ಇಲ್ಲಿ ಪ್ರಶ್ನೆಯಲ್ಲಿ ಹೇಳಿರತಕ್ಕ ಚಿಕ್ಕನಹಳ್ಳಿಯ ಸೇತುವೆ ಒಂದು ಮತ್ತು ಮನಂಗಿಯಬಳಿ ಒಂದು ಕಿರಿದಾದ ಸೇತುವೆಗಳಿರುವುದರಿಂದ ಈ ಎರಡನ್ನೂ ಬೇಗ ನರಿಪಡಿಸಿ ಕೊಡಿಸುತ್ತಿರಾ ?

ಶ್ರೀ ಬಿ. ಬಸವರಾಜ ಮಾಗಾವಿ.—ನ್ಯಾಷನಲ್ ಹೈವೇ ಡಿವಿಜನ್ ಎಂಬ ಒಂದು ಸೆಕ್ಷನ್ ಇದೆ. ಅದು ಈ ಆಂದಾಜು ಪ್ಲಾನುಗಳನ್ನೆಲ್ಲಾ ತಯಾರಿಸಿ ಕೇಂದ್ರಕ್ಕೆ ಕಳುಹಿಸಿ ಅಲ್ಲಿಂದ ಹಣ ಬರಬೇಕು. ರಾಜ್ಯ ಸರ್ಕಾರ ಅದಕ್ಕೆ ಹಣವನ್ನು ಹಾಕುವಹಾಗಿಲ್ಲ. ಬಂದ ಕೂಡಲೆ ಮಾಡಿಸಲಾಗುತ್ತದೆ.

2.00 P.M.

ಶ್ರೀ ಬಿ. ಗಂಗಣ್ಣ.—ಈಗ ತಾವು ಹೇಳುವುದೇನೋ ನರಿ. ಈ ನ್ಯಾಷನಲ್ ಹೈವೇ ಮಾಡುವುದಕ್ಕೆ ಪೂರ್ಣವಾಗಿ ಸಹಾಯವನ್ನು ಕೇಂದ್ರದವರು ಕೊಡುವುದಿಲ್ಲ. ತಮ್ಮ ಭಾಗವೂ ಇದರಲ್ಲಿ ನೇರಿರುವುದರಿಂದ ಕೇಂದ್ರದವರು ಕೊಡತಕ್ಕ ಧನಸಹಾಯದ ಬಗ್ಗೆ ಒತ್ತಾಯಮಾಡಿ ಈ ಕೆಲಸವನ್ನು ಶೀಘ್ರವಾಗಿ ಕೈಗೊಳ್ಳುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ. —ನ್ಯಾಷನಲ್ ಹೈವೇ ಕೆಲಸಕ್ಕೆ ಪೂರ್ಣವಾಗಿ ಕೇಂದ್ರ ಸರ್ಕಾರದವರೇ ಕೊಡುತ್ತಾರೆ. ಅದರಲ್ಲಿ ನಮ್ಮ ಭಾಗ ಏನೂ ಇಲ್ಲ. ಆದರೂ ಕೂಡ ಅವರು ಕೊಡತಕ್ಕ ಸಹಾಯದ ಬಗ್ಗೆ ಒತ್ತಾಯ ಮಾಡಿ ಶೀಘ್ರವಾಗಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Mr. DEPUTY SPEAKER.—Question hour is over.